# ರೈತರ ಕಲ್ಯಾಣ?

ಆಂಧ್ರಪ್ರದೇಶದ ರಾಜಕೀಯ ಮತ್ತೆ ಬಿಸಿ ಏರತೊಡಗಿದೆ. ರಾಜ್ಯ ಎರಡಾಗಿ ವಿಭಜನೆಯಾದ ಬಳಿಕ ಆಂಧ್ರಪ್ರದೇಶಕ್ಕೆ ಹೊಸ ರಾಜಧಾನಿ ನಿರ್ಮಿಸುವ ತಲೆಬಿಸಿಯಲ್ಲಿರುವ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, 32 ಸಾವಿರ ಎಕರೆ ಭೂಸ್ವಾಧೀನಕ್ಕೆ ಆದೇಶ ಹೊರಡಿಸಿದ್ದಾರೆ. ನೂರಾರು ಹಳ್ಳಿಗಳು ಹೊಸ ರಾಜಧಾನಿಯ ಸಲುವಾಗಿ ಗುಳೇ ಹೋಗಬೇಕಿವೆ. ಕೆಲವು ಹಳ್ಳಿಗಳ ರೈತರು ಈ ಭೂಸ್ವಾಧೀನಕ್ಕೆ ತಕರಾರು ಎತ್ತಿದ್ದಾರೆ. ಹೀಗೆ ತಕರಾರು ಎತ್ತಿರುವ 'ರಾಜಧಾನಿ ಹಳ್ಳಿ'ಗಳಲ್ಲಿ ತಿರುಗಾಟ ನಡೆಸಿದ ತೆಲುಗಿನ ಸೂಪರ್ ಸ್ಟಾರ್ ಪವನ್ ಕಲ್ಯಾಣ್, 'ರೈತರ ಪರವಾಗಿ ಬೀದಿಗಿಳಿದು ಹೋರಾಡಲು ಸಿದ್ಧ' ಎಂದು ಘೋಷಿಸಿದ್ದಾರೆ. ಪವನ್ ಈಗ ರಾಜಕಾರಣಿಯೂ ಆಗಿರುವುದರಿಂದ ಈ ಸುದ್ದಿ ಕಾವು ಪಡೆದುಕೊಂಡಿದೆ.

ಆಂಧ್ರಪ್ರದೇಶದ ರಾಜಕೀಯಕ್ಕೂ, ಬಂಗಾಳ ಕೊಲ್ಲಿಯ ಚಂಡಮಾರುತಗಳಿಗೂ ಹಲವು ಸಾಮ್ಯತೆಗಳಿವೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಒತ್ತಡ ಕುಸಿದು, ಚಂಡಮಾರುತ ಮೇಲೆದ್ದರೆ ಕರಾವಳಿಯ ನೂರಾರು ಹಳ್ಳಿಗಳು ನೆಲಸಮವಾಗುವುದು ಖಂಡಿತ. ಹಾಗೆಂದು ಎಲ್ಲ ವಾಯುಭಾರ ಒತ್ತಡಗಳೂ ಚಂಡಮಾರುತ ಆಗುವುದಿಲ್ಲ. ಬಹಳ ಸಲ ಒತ್ತಡ ಸಮುದ್ರದ ಮೇಲೆಯೇ ಕುಸಿದು, ಚಂಡಮಾರುತ ಕಣ್ಮರೆಯಾಗುವುದಿದೆ. ಆಂಧ್ರದ ರಾಜಕೀಯವೂ ಅಷ್ಟೆ. ಇಲ್ಲಿ ಹಲವಾರು ರಾಜಕಾರಣಿಗಳು ಚಂಡಮಾರುತದಂತೆಯೇ ಮೇಲೆದ್ದಿದ್ದಾರೆ. ಕೆಲವು ವರ್ಷಗಳ ಬಳಿಕ ಬಂದಂತೆಯೇ ಕಣ್ಮರೆಯಾಗಿದ್ದಾರೆ. ಎನ್‌ಟಿ ರಾಮರಾವ್, ಚಂದ್ರಬಾಬು ನಾಯ್ಡು, ರಾಜಶೇಖರ ರೆಡ್ಡಿ– ಎಲ್ಲರದ್ದೂ ಇದೇ ಕಥೆ. ಇದೀಗ ಸೂಪರ್‌ಸ್ಟಾರ್ ಪವನ್ ಕಲ್ಯಾಣ್ ಎಂಬ ಚಂಡಮಾರುತ ಆಂಧ್ರದ ರಾಜಕೀಯಕ್ಕೆ ಯಾವಾಗ ಅಪ್ಪಳಿಸುವುದೋ ಎಂಬ ಕುತೂಹಲ ಕೆರಳಿನಿಂತಿದೆ.

ಹಾಗೆ ನೋಡಿದರೆ ಕಳೆದ ಲೋಕಸಭಾ ಚುನಾವಣೆಯ ವೇಳೆಯೇ ಪವನ್ ಅವರ ಹೊಸ ಪಕ್ಷ 'ಜನಸೇನಾ' ತಲೆ ಎತ್ತಿತ್ತು. ಅಣ್ಣ ಚಿರಂಜೀವಿ ಕಾಂಗ್ರೆಸ್ ಪಕ್ಷದ ದೊಡ್ಡ ನಾಯಕನಾಗಿದ್ದರೂ, ತಮ್ಮ ಪವನ್ ಹೊಸ ಪಕ್ಷ ಸ್ಥಾಪಿಸಿದ್ದು ಅಲ್ಲಿ ಬಿಸಿ ಚರ್ಚೆಯ ವಿಷಯವಾಗಿತ್ತು. ಪವನ್, ನೇರ ಚುನಾವಣೆಗೆ ಸ್ಪರ್ಧಿಸದೆ, ಬಿಜೆಪಿ ಮತ್ತು ತೆಲುಗುದೇಶಂ ಮೈತ್ರಿಕೂಟಕ್ಕೆ ಬಹಿರಂಗ ಬೆಂಬಲ ಘೋಷಿಸಿದರು. ಆ ಪಕ್ಷಗಳ ಪರವಾಗಿ ಪ್ರಚಾರ ನಡೆಸಿದರು. ಕೇಂದ್ರದಲ್ಲಿ ಬಿಜೆಪಿ, ಆಂಧ್ರದಲ್ಲಿ ತೆಲುಗುದೇಶಂ ಅಧಿಕಾರಕ್ಕೆ ಬಂತು. ಪವನ್ ಸಿನಿಮಾದಲ್ಲಿ ಬ್ಯುಸಿಯಾದರು. 'ನನ್ನಿಂದಾಗಿಯೇ ಬಂತು' ಎಂದು ಪವನ್ ಎಲ್ಲೂ ಹೇಳಲಿಲ್ಲ. ಆದರೆ 'ಅಧಿಕಾರಕ್ಕೆ ಬಂದಿದ್ದೀರಿ, ಮಾತು ತಪ್ಪಿ ನಡೆದರೆ ನಾನು ಮತ್ತೆ ಪ್ರಶ್ನಿಸಲು ಬರುತ್ತೇನೆ' ಎಂದಿದ್ದರು ಪವನ್. ಈಗ ಅಂತಹ ಸಂದರ್ಭ ಬಂದಿದೆ. ಚುನಾವಣೆಯ ಸಮಯದಲ್ಲಿ 'ಆಂಧ್ರಪ್ರದೇಶಕ್ಕೆ ವಿಶೇಷ ರಾಜ್ಯ ಸ್ಥಾನಮಾನ ಕೊಡಿ, ಹಾಗಿದ್ದರೆ ಬೆಂಬಲಿಸುತ್ತೇನೆ' ಎಂದು ಬಿಜೆಪಿಯ ನರೇಂದ್ರ ಮೋದಿ ಮತ್ತು ತೆಲುಗುದೇಶಂನ ನಾಯ್ಡು ಇಬ್ಬರನ್ನೂ ಭೇಟಿಯಾಗಿ ಪವನ್ ಷರತ್ತು ಮಂಡಿಸಿದ್ದರು. ಆಗ ಇಬ್ಬರೂ ಗೋಣು ಅಲ್ಲಾಡಿಸಿದ್ದರು.

ಈಗ ಮತ್ತೆ ಪವನ್ ಅಖಾಡಕ್ಕೆ ಇಳಿದಿದ್ದಾರೆ. ಕಳೆದ ವಾರ ಆಂಧ್ರಪ್ರದೇಶದ 'ರಾಜಧಾನಿ ಹಳ್ಳಿ'ಗಳಲ್ಲಿ ತಿರುಗಾಡಿದ ಪವನ್, ಅಲ್ಲಿನ ರೈತರ ಜತೆ ಕುಳಿತು ಸುಖದುಃಖ ಚರ್ಚಿಸಿದ್ದಾರೆ. ಮೊಸರನ್ನ ಹಂಚಿಕೊಂಡಿದ್ದಾರೆ. ಆ ಬಳಿಕ ಮಾಧ್ಯಮಗಳ ಮುಂದೆ ಕುಳಿತು, 'ಬಿಜೆಪಿ ಅಧಿಕಾರಕ್ಕೆ ಬಂದು 9 ತಿಂಗಳಾದವು. ಆಂಧ್ರಕ್ಕೆ ವಿಶೇಷ ಸ್ಥಾನಮಾನ ಇನ್ನೂ ಏಕೆ ಕೊಟ್ಟಿಲ್ಲ?' ಎಂದು ಪ್ರಶ್ನಿಸಿದ್ದಾರೆ. 'ಹೊಸ ರಾಜಧಾನಿ ಕಟ್ಟಲು 32 ಸಾವಿರ ಎಕರೆ ಏಕೆ ಬೇಕು? ಇಲ್ಲೇನು ಸಿಂಗಾಪುರಕ್ಕಿಂತ ದೊಡ್ಡ ರಾಜಧಾನಿ ಕಟ್ಟುತ್ತಿದ್ದಾರೆಯೆ? ರೈತರ ಅನುಮತಿಯಿಲ್ಲದೆ ಭೂಸ್ವಾಧೀನ ಮಾಡಿದರೆ ಹುಷಾರ್' ಎಂದು ನಾಯ್ಡು ಅವರಿಗೂ ಎಚ್ಚರಿಕೆ ಕೊಟ್ಟಿದ್ದಾರೆ. ನಾಯ್ಡು ಅವರೂ ಎಚ್ಚರಿಕೆಯಿಂದಲೇ ಪ್ರತಿಕ್ರಿಯೆ ನೀಡಿದ್ದಾರೆ. 'ರಾಜಧಾನಿಯನ್ನು 1000 ಎಕರೆಯಲ್ಲೇ ಕಟ್ಟಬಹುದು. ಆದರೆ ಹೊಸ ರಾಜ್ಯಕ್ಕೆ ದೇಶ– ವಿದೇಶಗಳಿಂದ ಬಂಡವಾಳ ಹರಿದುಬರಬೇಕಾದರೆ ವಿಶಾಲ ರಾಜಧಾನಿ ಅಗತ್ಯವಿದೆ. ಹೆಚ್ಚುವರಿ ಭೂಮಿ ಬೇಕಿದೆ' ಎಂದಿದ್ದಾರೆ. 'ರೈತರನ್ನು ಗುಳೇ ಎಬ್ಬಿಸಿ ಬೀದಿಪಾಲು ಮಾಡುವ ಭೂಸ್ವಾಧೀನ ಕಾಯ್ದೆಯೇ ಸರಿಯಿಲ್ಲ' ಎಂದು ಪವನ್ ಗುಟುರು ಹಾಕಿದ್ದಾರೆ. ಅಂದರೆ ಒಂದೇ ಏಟಿಗೆ ಪಿಎಂ ಮೋದಿ ಮತ್ತು ಸಿಎಂ ನಾಯ್ಡು ಅವರ ಮುಂದೆ ಹೊಸ ರಾಜಕೀಯ ಸಂಕಟಗಳು ಮೇಲೆದ್ದು ನಿಲ್ಲುವಂತೆ ಮಾಡಿದ್ದಾರೆ.

ಪವನ್ ಪಕ್ಕಾ ರಾಜಕಾರಣಿ ಅಲ್ಲವಾದರೂ, ಅವರ ಈ ಹೊಸ ನಡೆಯಲ್ಲೊಂದು ಜಾಣ ರಾಜಕೀಯ ಅಡಗಿದೆ. ಎರಡೂ ಪಕ್ಷಗಳ ಹನಿಮೂನ್ ಅವಧಿ ಮುಗಿದಿದೆ ಎನ್ನುವುದು ಪವನ್‌ಗೆ ಖಚಿತವಾಗಿದೆ. ಈಗ ಜನರ ಮಧ್ಯೆ ಹೋಗುವುದಕ್ಕೆ ಸಕಾಲ. ಅದರಲ್ಲೂ ಭೂಸ್ವಾಧೀನದ ಪ್ರಶ್ನೆ ಬೆಂಬಲ ಕ್ರೋಢೀಕರಣಕ್ಕೆ ಹೇಳಿ ಮಾಡಿಸಿದಂತಿದೆ. ಪವನ್ ಬೇರೆ ತಾರೆಯರಂತಲ್ಲ. ಆತನ ಮಾತೆಂದರೆ ಏಕ್‌ಮಾರ್ ದೋ ತುಕ್‌ಡಾ. ಆತನೇನಾದರೂ ಸರ್ಕಾರದ ವಿರುದ್ಧ ಬೀದಿಗಿಳಿದರೆ, ಅಭಿಮಾನಿಗಳ ಆಕ್ರೋಶವನ್ನು ಎದುರಿಸುವುದು ಕಷ್ಟವೇ. ಅದು ಮುಖ್ಯಮಂತ್ರಿ ನಾಯ್ಡು ಅವರಿಗೂ ಗೊತ್ತಿದೆ. ಆದರೆ ಅವರ ಮುಂದೆ ಹೆಚ್ಚು ಆಯ್ಕೆಗಳಿದ್ದಂತಿಲ್ಲ. ಒಂದೋ ಪವನ್ ಒತ್ತಡಕ್ಕೆ ಮಣಿಯಬೇಕು; ಇಲ್ಲವೇ ಪವನ್ ಬೆದರಿಕೆಯನ್ನು ಲೆಕ್ಕಿಸದೆ ಭೂಸ್ವಾಧೀನ ಮುಂದುವರಿಸಬೇಕು. ಎರಡರಲ್ಲಿ ಯಾವುದು ಆದರೂ ಪವನ್‌ಗೇ ಲಾಭ! ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65